## ಪ್ರೀತಿ ಏಕೆ ಬದಲಾಗಿದೆ?




ನಿರ್ದೇಶಕ ಯೋಗರಾಜ ಭಟ್ಟರು ತಮ್ಮ ಮಾತಿನ ಚಟಾಕಿ, ವಿಡಂಬನೆಯ ಸಂಭಾಷಣೆಯ ಸಿನಿಮಾಗಳಿಂದ, ಡಿಂಗ್‌ಡಾಂಗ್ ಪದ್ಯಗಳಿಂದ ಪರಿಚಿತರಾಗಿದ್ದರು. ಈ ಸಂಚಿಕೆಯಲ್ಲಿ ಅವರು ಪ್ರೇಮ– ಕಾಮವನ್ನು ವ್ಯಾಖ್ಯಾನಿಸಿದ ರೀತಿ ಅವರ ವ್ಯಕ್ತಿತ್ವದ ಇನ್ನೊಂದು ಆಯಾಮವನ್ನು ಪರಿಚಯಿಸಿಕೊಟ್ಟಿತು. 'ಹೆಂಡತಿಯನ್ನು ದಿನಾ ಪ್ರೀತಿಸಲಿಕ್ಕಾಗುವುದಿಲ್ಲ' ಎಂಬ ಅವರ ಮಾತು ಅನುಭವದ ಮೂಸೆಯಿಂದ ಎದ್ದು ಬಂದಂತಿದೆ!

—ಸಂಕಪ್ಪ ಬೀರಾದಾರ, ವಿಜಯಪುರ

ಬೆಳದಿಂಗಳ ಬಾಲೆ ಸಿನಿಮಾ ನೋಡಿ ರೋಮಾಂಚನಪಟ್ಟವರು ನಾವು. ಈಗ ಆ ಚಿತ್ರದ ನಿರ್ದೇಶಕ ಸುನಿಲ್ ಕುಮಾರ್ ದೇಸಾಯಿ ನಿರೂಪಿಸಿದ ಆಧುನಿಕ ಬೆಳದಿಂಗಳ ಬಾಲೆಯ ಚಿತ್ರ ಮತ್ತಷ್ಟು ಖುಷಿ ಕೊಟ್ಟಿತು.

—ಸುಮನಾ, ಕಾಸರಗೋಡು

ಸುಶೀಲಾ ಡೋಣೂರ ಅವರ ಮುಖಪುಟ ಲೇಖನ ಪ್ರೇಮಿಗಳ ದಿನದ ಕುರಿತು ಅನೇಕ ಅಭಿಪ್ರಾಯಗಳ ಮಂಡನೆ ಮಾಡಿದೆ. ಆಧುನಿಕ ಸಮಾಜ ನಿರ್ಮಾಣವಾಗಿರೊ ಈ ಕಾಲದಲ್ಲಿ ಎಲ್ಲವೂ ಕೈಯೊಳಗಿನ ಗೊಂಬೆ! ಬೇಕಾದ ಅನಿಸಿಕೆಗಳ ಹೇಳಿ ವೇಗವಾಗಿ ಪ್ರತಿಕ್ರಿಯೆ ಪಡೆದುಕೊಂಡು ಗಲಿಬಿಲಿ ಚಿತ್ತಾರದಲ್ಲಿ ಆಕರ್ಷಣೆ ವಿಕರ್ಷಣೆಯಾಗುವುದೇ ಈಗಿನ 'ಲವ್'. ವ್ಯಾಲೆಂಟೈನ್ ಎನ್ನುವ ಮಹಾ ಸಂತನನ್ನು ನೆನೆಯಬಹುದಷ್ಟೇ. ಆದರೆ ಈ ಕಾಲಘಟ್ಟದ ಪ್ರೇಮಿಗಳು 'ಸ್ಥಿರವಲ್ಲದ ಮನಸ್ಥಿತಿಯ ಹಾರು ಬಿಲ್ಲೆಗಳು'.

—ಹೇಚ್. ಆನಂದ್‌ಕುಮಾರ್, ಚಿತ್ರದುರ್ಗ



### ವಲಸೆ ಎಂಬ ಬೇಗುದಿ

ಉದಯ ಕುಮಾರ್ ಬರೆದ ಲೇಖನ ಚೆನ್ನಾಗಿದೆ. ಆದರೆ ಸರ್ಕಾರಿ ಶಾಲೆಗಳಲ್ಲಿ ನಾಲ್ಕೈದು ತರಗತಿಗಳಿಗೆ ಒಬ್ಬರೇ ಶಿಕ್ಷಕರಿರುತ್ತಾರೆ. ಇದರಿಂದ ಮಕ್ಕಳ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವುದು ಶಿಕ್ಷಕರಿಗೆ ಸಾಧ್ಯವಾಗದು. ಕೇವಲ ಹಾಜರಿಗೆ, ಬಿಸಿಯೂಟಕ್ಕೆ ಮಾತ್ರ ಶಾಲೆಗೆ ಕಳಿಸುವುದರಿಂದ ಶಿಕ್ಷಣ ಕ್ಷೇತ್ರ ಅಭಿವೃದ್ಧಿಯಾಗಬಹುದೇ?

—ರಾಜೀವ್ ಎನ್. ಮಾಗಲ್, ಸಕಲೇಶಪುರ

ವಲಸೆ ಹೋಗಿ ಕೆಲಸ ಮಾಡುವವರು ಚಿಕ್ಕ ಮಕ್ಕಳ ಜವಾಬ್ದಾರಿಯನ್ನು ಅದಕ್ಕಿಂತ ದೊಡ್ಡ ಮಗುವಿಗೆ ವಹಿಸುತ್ತಾರೆ. ಬಾಲ ಕಾರ್ಮಿಕ ಪದ್ಧತಿಗೂ ಬಲಿ ಮಾಡುವರು. ವಲಸಿಗರು ಕೆಲಸ ಮಾಡುವ ಸ್ಥಳದ ಹತ್ತಿರದಲ್ಲಿ ಅಂಗನವಾಡಿ (ಶಿಶು ವಿಹಾರ) ಹಾಗೂ ವಸತಿ ಶಾಲೆಗಳು ಇರಬೇಕು.

—ಮಹಾವೀರ ಕಾಸರ, ಶಿವಮೊಗ್ಗ

### ಸಮುದ್ರ ಮಥನದ ಪುಟ ವಿನ್ಯಾಸ

'ಸಮುದ್ರ ಮಥನ' ಪುಟದ ವಿನ್ಯಾಸ ಮತ್ತು ಸುಂದರ ಮುದ್ರಣ ನೋಡಿ ಬಹಳ ಖುಷಿ ಎನಿಸಿತು. ಮುಂದೆಯೂ ಈಗಿನ ವಿನ್ಯಾಸ, ಅಂದ ಮುಂದುವರಿಯಲಿ.

—ಕೊಹಿಮ, ಬಸರಕೋಡು

### ಏರೋ ಷೋ, ಹಾರೋ ಷೋ

ಶಶಿಕುಮಾರ್ ಅವರ ಲೇಖನ ತುಂಬಾ ಆಸಕ್ತಿಯನ್ನುಂಟು ಮಾಡಿದೆ. ಕಳೆದ ಅನೇಕ ವರ್ಷಗಳಿಂದ ಹೋಗಬೇಕೆಂದುಕೊಂಡಿದ್ದರೂ ಆಗಿರಲಿಲ್ಲ. ಇದರ ಮಧ್ಯ ಈ ಏರ್ ಷೋ ಸ್ಥಳಾಂತರವಾಗುವುದು ತಿಳಿದು ತುಸು ಬೇಸರವಾಗಿದ್ದು ಸಹಜವೇ. ಹಾಗಾಗದಿದ್ದುದು ಸಂತಸದ ಸಂಗತಿ. ಈ ಏರ್ ಷೋಗೆ ಶತಮಾನಗಳ ಮೀರಿದ ಇತಿಹಾಸವುಂಟೆಂಬುದು ಇನ್ನಷ್ಟು ಸಂತಸಕರ ವಿಷಯ. ಇದು ಹೀಗೆಯೇ ನಡೆಯುತ್ತಿರಲಿ.

—ಡಾ.ಕೆ.ಕೆ. ಜಯಚಂದ್ರ ಗುಪ್ತ, ಹಾಸನ

### ಧರ್ಮಸೂಕ್ಷ್ಮದ ವ್ಯಾಖ್ಯಾನ

'ಧರ್ಮಸೂಕ್ಷ್ಮ' ಕಥೆಯಲ್ಲಿ (ಪ್ರೇಮಾ ಎನ್. ರಾವ್), ಮೂಲ ರಾಮಾಯಣದಲ್ಲಿ ಅಡಕವಾಗಿದ್ದ ಹಲವು ಅಂಶಗಳಿಗೆ ತಮ್ಮದೇ ವ್ಯಾಖ್ಯೆಯನ್ನು ಕಥೆಯಲ್ಲಿ ಬರುವ 'ಶಾಸ್ತ್ರಿಗಳು'ಕೊಟ್ಟಿದ್ದಾರೆ. ಆದರೂ ಮೂಲ ರಾಮಾಯಣವನ್ನು ಶತ ಶತಮಾನಗಳಿಂದ ಓದಿರುವ, ಪಾರಾಯಣ ಮಾಡುವ ಜನತೆ ಈ ಹೊಸ ವ್ಯಾಖ್ಯೆಗಳನ್ನು ನಂಬಬಹುದು, ನಂಬದಿರಲೂಬಹುದು. ಏನೇ ಆದರೂ ಈ ನೂತನ ವ್ಯಾಖ್ಯಾನ ಇಕ್ಕಟ್ಟಿಗೆ ಸಿಕ್ಕಿಸಿದೆ ಎಂಬುದು ನನ್ನ ಅನಿಸಿಕೆ.

—ಸುಂದರ್, ಬೆಂಗಳೂರು

### ಲಂಡನ್ನಿನಲ್ಲಿ ಟೆಲಿಫೋನ್ ಬೂತ್‌ಗಳು



'ಹಳೆಯದೆಲ್ಲ ಹೊನ್ನು' ಎನ್ನುವ ಆಂಗ್ಲರ ಮನೋಭಿಲಾಷೆಗೆ ಲೇಖನ ಕನ್ನಡಿ ಹಿಡಿದಂತಿದೆ. ಟೆಲಿಫೋನ್ ಬೂತ್‌ಗಳು ಗ್ರಾಹಕ ಸ್ನೇಹಿ ಅಂಗಡಿಗಳಾಗಿ ಪರಿವರ್ತನೆಗೊಳ್ಳುತ್ತಿರುವುದು ನಿಜಕ್ಕೂ ಅನುಕರಣೀಯ.

—ಮುಕುಂದ ಹೆರಕಲ್ಲ, ಕಲಬುರ್ಗಿ

### ಸುಮಧುರ ಒಗ್ಗರಣೆ

ದಿಢೀರ್ ಶ್ರೀಮಂತರಾಗಬೇಕೆನ್ನುವ ಮೋಸಗಾರರು, ಬಾಯಿ ರುಚಿಗಾಗಿ ತಮ್ಮ ಅಡುಗೆ ಮನೆ ಬಿಟ್ಟು ಹೊರಗೆ ಹೋಗಿ ತಿನ್ನಬೇಕೆನ್ನುವ ಚಪಲಿಗರು ಇವರೆಲ್ಲರ ಆಕರ್ಷಣೆಯಾಗಿರುವ ಮಲ್ಟಿ ಸ್ಪೆಷಾಲಿಟಿ ನರ್ಸಿಂಗ್ ಹೋಂಗಳ ಸಂಖ್ಯೆ ಜಾಸ್ತಿಯಾಗಿವೆ. ಅಡುಗೆ ಮನೆಗಳ ಈಗಿನ ವೈಭವವನ್ನು ಡಾ. ಪ್ರೇಮಲತ. ಬಿ. ಸುಮಧುರ ಒಗ್ಗರಣೆಯೊಂದಿಗೆ ಓದುಗರಿಗೆ ಉಣಬಡಿಸಿದ್ದಾರೆ.

—ರಾಜಶೇಖರ ಹಾದಿಮನಿ, ಧಾರವಾಡ

### ನಭದ ನೀಲಿಯಲಿ ನೀಲಕಂಠ

ಕೆ.ಎಚ್. ಓಬಳೇಶ್ ಅವರ ಪಕ್ಷಿಚಿತ್ರಲೇಖನದಲ್ಲಿ ನೀಲಕಂಠ ಪಕ್ಷಿಯ ದೈಹಿಕ ರಚನೆ ಮತ್ತು ಜೀವನಕ್ರಮ ಕುರಿತು ಉತ್ತಮ ಮಾಹಿತಿ ನೀಡಿದ್ದಾರೆ. ಚಿತ್ರಗಳು ಆಕರ್ಷಕವಾಗಿದ್ದು, ಕಣ್ಮನ ಸೆಳೆಯುವಂತಿವೆ. ಚಿತ್ರಗಳಿಗೆ ಸಂಬಂಧಿಸಿದಂತೆ, ಚಿತ್ರಗಳ ಜೊತೆಗೆ ಅದರ ತಾಂತ್ರಿಕ ವಿವರಣೆಗಳೂ (ಬಳಸಿದ ಕ್ಯಾಮೆರಾ ಮಾಡೆಲ್, ಲೆನ್ಸ್, ಶಟರ್ ವೇಗ ಇತ್ಯಾದಿ)ಇದ್ದರೆ ಅದು ಉದಯೋನ್ಮುಖ ಛಾಯಾಗ್ರಾಹಕರಿಗೆ ಉಪಯೋಗವಾಗಬಹುದು.

—ಬಿ. ಮನೋಹರ, ಚಳ್ಳಕೆರೆ

### ಕುರಿಂಗಲ್ಲು ಸೂಜಿಗಲ್ಲು

ಶ್ರೀ ಪ್ರಸಾದ್ ಶೆಣೈ ಆರ್.ಕೆ. ಬರೆದ ಪ್ರವಾಸ ಲೇಖನ ಅನುಭವವೇದ್ಯವಾಗಿತ್ತು. ಅಲ್ಲಿಯ ಪ್ರಕೃತಿ ಸೌಂದರ್ಯ ವರ್ಣಾತೀತ. ಅಷ್ಟೇ ಆಸಕ್ತಿಯಿಂದ ಚಾರಣವನ್ನು ಮುಗಿಸಿದ ಲೇಖಕರ ಅನುಭವ ನಿಜಕ್ಕೂ ಸಾಹಸಪ್ರಿಯ. ನಾನೂ ಮಾಳದಲ್ಲಿ ಹುಟ್ಟಿ ಬೆಳೆದಿರುವುದರಿಂದ ತಾವು ಪ್ರಕಟಿಸಿದ ಚಾರಣ ಕಥೆ ಅರ್ಥಪೂರ್ಣವಾಗಿದೆ.

—ಎಂ. ಸದಾನಂದ ಡೊಂಗ್ರೆ, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in